**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು, ಜೆ.ಎಂ.ಎಫ್.ಸಿ./ಎಂ.ಎ.ಸಿ.ಟಿ. ಇವರ ನ್ಯಾಯಾಲಯ, ಮುಧೋಳ**
**ಇಂದು ದಿನಾಂಕ 16.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರ 2 ರವರ ಪರವಾಗಿ ಶ್ರೀ. ಎ ಸಿ ಎನ್ . ವಕೀಲರಿಂದ**

ನಾನು ಈ ಕೇಸಿನಲ್ಲಿ ಎದುರುದಾರ 2 ರವರ ಹಾಜರಾಗಿದ್ದು, ಈ ದಿನ ನ್ಯಾಯಾಲಯದ ಮುಂದೆ ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ವಿಚಾರಗಳೆಲ್ಲವೂ ಸತ್ಯವಾಗಿರುತ್ತವೆ.

| | |
|---|---|
| ನಿಆರ್ 1 | ಎದುರುದಾರ 2 ರವರು ಸಾಕ್ಷಿದಾರ ಹೆಸರಿನಲ್ಲಿ ಬರೆದುಕೊಟ್ಟಂತಹ ಅಧಿಕಾರ ಪತ್ರ |
| ನಿಆರ್ 2 | ವಾಹನದ ವಿಮಾ ಪಾಲಿಸಿ |

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ ಎಂ ಜೆ ಎನ್ ರವರ ಪರವಾಗಿ**ಃ

ನಾನು ಕಳೆದ 4 ವರ್ಷಗಳಿಂದಲೂ ಎದುರುದಾರ 2 ರವರ ವಿಮಾ ಕಂಪನಿಯಲ್ಲಿ ಕಚೇರಿಯ ಆಡಳಿತ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವೆನು. ನನಗೆ ಈ ಅಪಘಾತವಾದ ಬಗ್ಗೆ ದಾಖಲೆಗಳ ಆಧಾರದ ಮೇರೆಗ ಮಾಹಿತಿ ಇರುವುದು, ಆದರೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ. ನಾನು ಈ ಪ್ರಕರಣದಲ್ಲಿ ದಾಖಲೆಗಳ ಆಧಾರದ ಮೇರೆಗೆ ಮಾತ್ರ ಸಾಕ್ಷಿ ನುಡಿಯುತ್ತಿರುವೆನು ಎಂದರೆ ಸರಿ. ಈ ಅಪಘಾತವಾದ ಸಮಯದಲ್ಲಿ 1 ನೇ ಎದುರುದಾರ ಮಾಲೀಕತ್ವದ ವಾಹನ ನೊಂದಣಿ ಸಂಖ್ಯೆ ಕೆಎ-22-ಎನ್ 3538 ರ ವಾಹನ ವಿಮೆಗೆ ಒಳಪಟ್ಟಿತ್ತು ಎಂದರೆ ಸರಿಯಲ್ಲ.

2. ನಿಆರ್ 2 ರ ದಾಖಲಾತಿಯು ವಾಹನ ನೊಂದಣಿ ಸಂಖ್ಯೆ ಕೆಎ-22-ಎನ್ 3538 ರ ವಾಹನದ ವಿಮಾ ಪಾಲಿಸಿಯಾಗಿರುವುದು ಎಂದರೆ ಸರಿ. ಈ ಅಪಘಾತವು ದಿಃ 25.04.2024 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಆಗಿರುವುದು ಎಂದರೆ ಸರಿಯಲ್ಲ. ಆದರೆ ಈ ಅಪಘಾತ ದಿಃ 24.04.2024 ರಂದು ಆಗಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ನಿಪಿ 1 ರ ಪ್ರಥಮ ವರ್ತಮಾನ ವರದಿಯಲ್ಲಿ ಈ ಅಪಘಾತ ದಿಃ 25.04.2024 ರಂದು ಆಗಿರುವುದಾಗಿ ಎಂದು ನಮೂದು ಮಾಡಿರುವರು ಎಂದರೆ ಸರಿ. ಈ ಪ್ರಥಮ ವರ್ತಮಾನ ವರದಿಯಲ್ಲಿರುವ ಸಂಗತಿಗಳು ನಿಜವಿರುವುದಿಲ್ಲ ಎಂದು ಹೇಳಿ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. ಈ ಅಪಘಾತ ದಿಃ 24.04.2024 ಆಗಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಿಆರ್ 2 ರ ದಾಖಲೆಯ ಪ್ರಕಾರ 1 ನೇ ಎದುರುದಾರ ಮಾಲೀಕತ್ವದ ವಾಹನದ ವಿಮೆಯು

ದಿಃ 24.04.2024 ರಂದು ಸಮಯ ಸಾಯಂಕಾಲ 6 ಗಂಟೆ 21 ನಿಮಿಷಕ್ಕೆ ಪ್ರಾರಂಭವಾಗುವುದಾಗಿ ಎಂದು ನಮೂದು ಮಾಡಿರುವರು ಎಂದರೆ ಸರಿ. ಈ ಅಪಘಾತ ದಿಃ 25.04.2024 ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಆಗಿರುವುದು ಎಂದರೆ ಸರಿಯಲ್ಲ. ನಿಆರ್ 2 ರ ಪ್ರಕಾರ ಈ ಅಪಘಾತವಾದ ಸಮಯದಲ್ಲಿ 1 ನೇ ಎದುರುದಾರ ವಾಹನ ನಮ್ಮ ಕಂಪನಿಯಿಂದ ವಿಮೆಗೆ ಒಳಪಟ್ಟಿತ್ತು ಎಂದರೆ ಸರಿಯಲ್ಲ. ಈ ಪ್ರಕರಣದ ಅರ್ಜಿದಾರನಿಗೆ ದಿಃ 24.04.2024 ಮೊದಲೇ ಗಾಯಗಳು ಆದ ಬಗ್ಗೆ ದಾಖಲೆಗಳನ್ನು ಹಾನರು ಪಡಿಸಿರುವುದಿಲ್ಲ. ಅರ್ಜಿದಾರನಿಗೆ ಈ ಅಪಘಾತವಾದ ನಂತರ ಈ ಗಾಯಗಳು ಆಗಿವೆ ಅಂತ ಸೂಚಿಸುವುದು ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾ ಪತ್ರದಲ್ಲಿ ಬರೆಸಿ ಹಾಕಿರುವ ಎಲ್ಲಾ ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ.

4. ಪೋಲಿಸರು ಈ ಅಪಘಾತವಾದ ನಂತರ ತನಿಖೆಯನ್ನು ಕೈಗೊಂಡು ಆ ಸಮಯದಲ್ಲಿ ಇರುವ ಸಂಗತಿಗಳ ಬಗ್ಗೆ ತಮ್ಮ ಅಂತಿಮ ದೋಷಾರೋಪಣ ಪಟ್ಟಿಯಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಎಲ್ಲಾ ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಪರಿಹಾರ ನೀಡಬಾರದು ಎಂಬ ಕಾರಣಕ್ಕೆ ನಾನು ಉದ್ದೇಶಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ಹಣ ನೀಡಲು 1 ನೇ ಎದುರುದಾರ ಪರವಾನಿಗೆ ಬಾದ್ಯಸ್ಥರು ಇದ್ದರು ಸಹಿತ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರ ಮತ್ತು ಅವರ ವಕೀಲರನ್ನು ಕೂಗಿಸಲಾಯಿತು, ನ್ಯಾಯಾಲಯದಲ್ಲಿ ಹಾಜರು ಇರದ ಕಾರಣ ಅವರ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ : ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR

Digitally signed by VIJAYAKUMAR KANNUR
Date: 2025.10.16 18:03:43 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ.,/ಎಂ ಎ ಸಿ ಟಿ., ಮುಧೋಳ